ಬಿಂದುರಾಯರು ಬಂದಿದ್ದರು. ತಿರುಗಿ ಬರುವ ಮುಂದೆ ಅವರಿಗೆ ಮನೆಯ ಸ್ಥಳವನ್ನು ತೋರಿಸಿದೆನು.

ಭಾಷಣವನ್ನು ಬರೆಯಲು ಆರಂಭಿಸಿರುವೆನು. ಉಪೋದ್ಘಾತವು ಮುಗಿದಂತಾಗಿದೆ. ಕವಿಯ ಆವಶ್ಯಕತೆಯೇನು ಎಂಬುದನ್ನು ಕುರಿತು ಬರೆದೆನು. ಕವಿಯ ಕಾರ್ಯವೇನೆಂಬುದನ್ನು ಬರೆಯಲಿರುವೆನು. ಮುಂದಿನ ಮಾತು?

**4-12-41 ರಾತ್ರಿ 9.5**

ನಿನ್ನೆ ರಾತ್ರಿ ಬಲು ದಣಿವು. ನಿನ್ನೆ ಸಾಯಂಕಾಲದಿಂದ ಈವರೆಗೂ ಮಳೆ. ಪಾಂಡುರಂಗರಾಯರು ನಿನ್ನೆ ರಾತ್ರಿ ಬಂದರು. ನನಗೆ ಸಮಾಧಾನ.

ನನ್ನ ಅಧ್ಯಕ್ಷೀಯ ಭಾಷಣವನ್ನು ಬರೆಯಲು ಆರಂಭಿಸಿದ್ದೇನೆ. ಉಪೋದ್ಘಾತವು ಮುಗಿದಿದೆ. ಮುಂದಿನ ಕೆಲವು ಭಾಗವನ್ನು ಬರೆವುದಾಗಿದೆ. ಮಿತ್ರರ ಮನಸ್ಸಿಗೆ ಬಂದಿದೆ. ನಾಳೆ ಶ್ರೀಕೃಷ್ಣಮಾಚಾರ್ಯರನ್ನು ಕಾಣಲು ಹೋಗಬೇಕೆಂದಿರುವೆನು.

**5-12-41 ರಾತ್ರಿ 9.58**

ಇಂದು ಮಳೆ ಇಲ್ಲ. ಬಿಸಿಲು. ಬಾವಿ ಮೋಸ ಮಾಡಿತು. ಕಲ್ಲು ಎಂದು ತಿಳಿದಿದ್ದೆನು. ಆದರೆ ಮಳೆಗೆ ಅರಳಿದೆ. ಹೇಡಿ ಮಣ್ಣು ಗಟ್ಟಿಯಾಗಿ ಕಲ್ಲಿನಂತೆ ತೋರಿತು!

ಮುಂಜಾವಿನಲ್ಲಿ ಶ್ರೀ ಕೃಷ್ಣಮಾಚಾರ್ಯರನ್ನು ಕಂಡೆನು. ಎಷ್ಟು ಒಳ್ಳೆಯವರು ಅವರು! ಎಷ್ಟು ಪ್ರೇಮ ಅವರದು ನನ್ನಲ್ಲಿ! ನಾಳೆ ಊಟದ ಆಮಂತ್ರಣವನ್ನು ಸ್ವೀಕರಿಸಿದರು. ಡಾ. ಕಬ್ಬೂರ ನಾರಾಯಣನೂ ಬರುವೆನೆಂದು ಒಪ್ಪಿಕೊಂಡನು.

ಭಾಷಣವು ಮುಂದುವರಿದಿದೆ.

ಪರೋತ್ಕರ್ಷದಿಂದ ಕೆಲವರಿಗೆ ಅಸಮಾಧಾನವೇಕೆ?

**6-12-41 ರಾತ್ರಿ 10.20**

ಶ್ರೀ ಕೃಷ್ಣಮಾಚಾರ್ಯರು ಊಟಕ್ಕೆ ಬಂದಿದ್ದರು. ಡಾಕ್ಟರ ಕಬ್ಬೂರ ನಾರಾಯಣನೂ ಬಂದಿದ್ದನು. ಕೃಷ್ಣಮಾಚಾರ್ಯರ ಕಾರಕೂನ ಶ್ರೀ ನಾಗೇಶ್ವರನ್ ಇವರೂ ಬಂದಿದ್ದರು. ಕೃಷ್ಣಮಾಚಾರ್ಯರು ನಮ್ಮ ಶಾಲೆಗೆ ಸಾಯಂಕಾಲ ಸಂದರ್ಶನವಿತ್ತರು. ಶಿಕ್ಷಕರಿಗೆ ಚಿಕ್ಕ ಭಾಷಣವನ್ನಿತ್ತರು. ಉಪಾಹಾರವನ್ನು ಸ್ವೀಕರಿಸಿದರು. ಅವರ ಭಾಷಣವು ವಿದ್ವತ್ತಾದ್ಯೋತಕವೂ ಉದ್ಬೋಧಕವೂ ಆಗಿದ್ದಿತು. ನಾಳೆ ಬೆಳಗಿನಲ್ಲಿ ಗೋಕರ್ಣಕ್ಕೆ ಹೊರಡುವರು. ಪಾಂಡುರಂಗರಾಯರೂ ಅವರೊಡನೆ ಹೊರಡುವರು.

ಭಾಷಣಲೇಖನವು ಸ್ವಲ್ಪ ಮುಂದುವರಿದಿದೆ. ಕವಿಗೆ ತಪಶ್ಚರ್ಯೆಯ ಆವಶ್ಯಕತೆಯಿದೆ ಎಂಬುದನ್ನು ಸ್ಪಷ್ಟಗೊಳಿಸಲು ಯತ್ನಿಸಿದ್ದೇನೆ. ಶ್ರೀಹರಿ, ಅಧ್ಯಕ್ಷ ಪದಕ್ಕೆ ಅನುಗುಣವಾಗಲಿ ನನ್ನ ಭಾಷಣ.

**8-12-41 ರಾತ್ರಿ 9.50**

ತಂದೆ, ನನ್ನ ನಾಡಿನ ಅವನತಿ ಎಂದು ಇಲ್ಲದಾಗುವುದು? ದ್ವೇಷಾಸೂಯಾಮಾತ್ಸರ್ಯಗಳು ಎಂದು ನಷ್ಟವಾಗುವುವು? ಬಂಧುಭಾವವು ಎಂದು ನೆಲೆಗೊಳ್ಳುವುದು? ಪ್ರಭುವೆ, ನನ್ನ ನಾಡನ್ನು ರಕ್ಷಿಸು, ರಕ್ಷಿಸು! ನನ್ನಲ್ಲಿಯೂ ಜಾತಿದ್ವೇಷವನ್ನು ಕಾಣುತ್ತಿರುವರಲ್ಲ! ಎಷ್ಟೊಂದು ಕಲುಷಿತ ದೃಷ್ಟಿಯಿದು! ಶ್ರೀಹರಿ, ನನ್ನ ಹೃದಯವನ್ನು ನೀನು ಬಲ್ಲೆ. ಇದ್ದುದು ಇದ್ದಂತೆ ತೋರುವಂತೆ ಮಾಡಯ್ಯಾ! ತಾಯ್ನಾಡೆ, ಕನ್ನಡನಾಡೆ, ನೀನು ಇನ್ನೂ ಎಷ್ಟು ಕಾಲ ಛಿನ್ನಾಂಗವಾಗಿರಬೇಕು? ದೇವಾ, ಬೆಳಕನ್ನು ಕೊಡು, ನನ್ನ ಬಾಂಧವರಿಗೆ ವಿವೇಕವನ್ನು ಕೊಡು, ನಮ್ಮನ್ನು ರಕ್ಷಿಸು!

**9-12-41ರಾತ್ರಿ 9.9**

ಬಾವಿ ನೂರು ಅಡಿ ಒಳಗೆ ಹೋಗಿದೆ, ಆದರೂ ನೀರಿಲ್ಲ! ಜಲಶಿಲ್ಪಿ ಜೋಶಿಯವರ ಮಾತು ಯಾವ ಬಗೆಯಲ್ಲಿಯೂ ಸತ್ಯವಾಗಲಿಲ್ಲ. ಉಪಾಯವಿಲ್ಲ!

ಶ್ರೀ ತಟ್ಟಿ ಶ್ಯಾಮರಾಯರು ಕಾರವಾರ ಹೈಸ್ಕೂಲಿಗೆ ಮುಖ್ಯಾಧ್ಯಾಪಕರಾಗಿ ಹೋಗುವರು. ಅವರಿಗೆ ಹಿಂದಿ ವಿದ್ಯಾಲಯದಲ್ಲಿ ಸತ್ಕಾರ ಸಮಾರಂಭವು ಇಂದು, ನಾನು ಆಮಂತ್ರಿತನಾಗಿ ಹೋಗಿದ್ದೆನು.

ಭಾಷಣವನ್ನು ಬರೆದು ಮುಗಿಸಿದೆನು. ಆದರೆ ಇನ್ನೊಂದು ಮಾತನ್ನು ಸೇರಿಸಬೇಕೆಂಬ ವಿಚಾರವು ಈಗ ಬಂದಿದೆ. ಹೈದರಾಬಾದಕ್ಕೆ ಪತ್ರ ಬರೆದೆನು.

ಪಾಂಡುರಂಗರಾಯರು ಸಾಯಂಕಾಲ ಗೋಕರ್ಣದಿಂದ ತಿರುಗಿ ಬಂದರು.